MVC No. 518/2019 PW-4

<u>ದಿನಾಂಕ **26.10.2023** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ವಕೀಲರಿಂದ ಃ</u>

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು 1 ವರೆ ವರ್ಷಗಳಿಂದ ಮೊಬೈಲ್ ಅನ್ನು ಬಳಸುತ್ತಿದ್ದೇನೆ. ನನಗೆ ಪಿಡಬ್ಲ್ಯೂ 3 ರವರ ಮೊಬೈಲ್ ನಂಬರ್ ಅನ್ನು ನನ್ನ ಪುಸ್ತಕದಲ್ಲಿ ನೋಡಿ ಹೇಳಬಹುದು. ನಾನು ವ್ಯಾಪಾರ ಮಾಡುತ್ತೇನೆ. ದಿಃ21.06.2019 ರಂದು ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ಅಪಘಾತವಾದ ದಿನ ಮೋಟಾರ್ ಸೈಕಲ್ ಸವಾರ ಸ್ವಲ್ಪ ಮುಂದೆ ಹೋಗಿ ಆತನೂ ಬಿದ್ದಿದ್ದ ಮತ್ತು ಆತನೂ ಕೂಡ ಆಸ್ಪತ್ರೆಗೆ ಕರಿಯಪ್ಪರವರನ್ನು ಕರೆದುಕೊಂಡು ಹೋಗುವಾಗ ಬಂದಿದ್ದ. ಮೋಟಾರ್ ಸೈಕಲ್ ಅನ್ನು ರಾಜಣ್ಣರವರು ಚಾಲನೆ ಮಾಡುತ್ತಿದ್ದರು. ನಾನು ಮತ್ತು ರಾಜಣ್ಣ ರವರು ಕರಿಯಪ್ಪರವರನ್ನು ಮೊದಲು ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣಕ್ಕೆ ಕರೆದುಕೊಂಡು ಹೋಗಿರುತ್ತೇವೆ. ನಾನು ಮೊಬೈಲ್ ಕರೆ ಮಾಡಿ ಪಿ ಡಬ್ಲ್ಯೂ 3 ರವರಿಗೆ ಮೋಟಾರ್ ಸೈಕಲ್ ನ ನೋಂದಣಿ ಸಂಖ್ಯೆ ಹೇಳಿರುತ್ತೇನೆ. ನಾನು ಮೋಟಾರ್ ಸೈಕಲ್ ನಂಬರ್ ಅನ್ನು ನೋಡಿ ಮಣ್ಣಿನ ಮೇಲೆ ಬರೆದು ನಂತರ ಕರೆ ಮಾಡಿ ತಿಳಿಸಿರುತ್ತೇನೆ. ನಾನು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ವಾಹನದ ನೊಂದಣಿ ಸಂಖ್ಯೆಯನ್ನು ಹೇಳಿಲ್ಲ. ಪೋಲಿಸರು ಅಪಘಾತವಾದ ಸ್ಥಳಕ್ಕೆ ಮಹಜರಿಗೆ ಬಂದಿದ್ದಾಗ ನಾನು ಹೇಳಿಕೆ ಕೊಟ್ಟಿರುತ್ತೇನೆ. ಸ್ಥಳ ಮಹಜರ್ ಅನ್ನು ಜರುಗಿಸಿದಾಗ ನಾನು ಸ್ಥಳದಲ್ಲಿ ಇದ್ದೆ. ನನಗೆ ಚಂದ್ರಯ್ಯ ರವರು ಗೊತ್ತು, ಆತ ಸದರಿ ದಿನ ಅಂದರೆ ಮಹಜರ್ ಸಮಯದಲ್ಲಿನನ್ನ ಜೊತೆ ಇರಲಿಲ್ಲ. ನಾರಾಯಣ ಎನ್ನುವವರು ನನಗೆ ಗೊತ್ತಿಲ್ಲ. ಪೋಲಿಸರು ಮಹಜರ್ ಅನ್ನು ನಡೆಸುವಾಗ ರಾಕಯ್ಯರವರು ಸ್ಥಳದಲ್ಲಿ ಇರಲಿಲ್ಲ. ನಾನು ಅಪಘಾತವಾದಾಗ ಇರಲಿಲ್ಲ ಮತ್ತು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಆದ್ದರಿಂದ ಪೋಲಿಸ್ ದಾಖಲಾತಿಗಳಲ್ಲಿ ನನ್ನ ಹೆಸರು ಮತ್ತು ನನ್ನ ಸಹಿ ನಮೂದಾಗಿಲ್ಲ ಎಂದರೆ ಸಾಕ್ಷಿ ನಾನು ಸ್ಥಳದಲ್ಲಿ ಇದ್ದೆ ಎಂದುನುಡಿಯುತ್ತಾರೆ. ನಾನು ಈ ಅಪಘಾತವನ್ನು

ಕಣ್ಣಾರೆ ನೋಡಿಲ್ಲ ಆದ್ದರಿಂದ ನಾನು ಪೋಲಿಸರಿಗೆ ದೂರನ್ನು ನೀಡಿಲ್ಲ ಕೇವಲ ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಈ ಕೇಸಿಗೆ ಸಂಬಂದಪಟ್ಟಂತೆ ಚನ್ನಪಟ್ಟಣದ ಇನ್ನೊಂದು ನ್ಯಾಯಾಲಯದಲ್ಲಿ ಸಾಕ್ಷ್ಯಾವನ್ನು ನುಡಿದಿರುತ್ತೇನೆ. ಸದರಿ ಕೇಸಿನ ಸಂಖ್ಯೆ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.